# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

## ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
## BRAHMASHRI NARAYANAGURU ADHYAYANA PEETHA

Phone: 0824-2284689, 9845665807, Email: narayanagurupeethamu@gmail.com


# ‘ನಾರಾಯಣಗುರು ಸಂಶೋಧನಾ ಪ್ರಶಸ್ತಿ’ ಗೆ ಹಸ್ತಪ್ರತಿ ಆಹ್ವಾನ

ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವು 2021ರಿಂದ **‘ನಾರಾಯಣಗುರು ಸಂಶೋಧನಾ ಪ್ರಶಸ್ತಿ’**ಯನ್ನು ನೀಡುವ ಯೋಜನೆಯನ್ನು ಆರಂಭಿಸಿದೆ. ಯುವ ಜನಾಂಗದಲ್ಲಿ ಶಿಕ್ಷಣ, ಸಾಮಾಜಿಕ ಸಾಮರಸ್ಯ ಹಾಗೂ ಸಾಂಸ್ಕೃತಿಕ ಜಾಗೃತಿಯನ್ನು ಮೂಡಿಸುವ ಸಲುವಾಗಿ ವಿಶ್ವವಿದ್ಯಾನಿಲಯ ಹಾಗೂ ಸಂಯೋಜಿತ ಕಾಲೇಜುಗಳ ಉಪನ್ಯಾಸಕರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಮತ್ತು ಹಳೆವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ಮೀಸಲಾಗಿದೆ. ನಾರಾಯಣ ಗುರುಗಳ ತತ್ವ ಸಂದೇಶಗಳನ್ನು ಅಧ್ಯಯನ ಮತ್ತು ಸಂಶೋಧನೆ ಮಾಡುವ ನಿಟ್ಟಿನಲ್ಲಿ **‘ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಚಿಂತನೆಯ ಮೂಲಕ ನಾರಾಯಣ ಗುರುಗಳ ಸಮಾಜ ಸೇವೆ’** ಎಂಬ ವಿಷಯದ ಕುರಿತು ಸಂಶೋಧನಾತ್ಮಕ ಅಧ್ಯಯನವನ್ನು ನಡೆಸುವ ಯೋಜನೆ ಇದಾಗಿದೆ.

**‘ನಾರಾಯಣಗುರು ಸಂಶೋಧನಾ ಪ್ರಶಸ್ತಿ’ಯ ನಿಯಮ ನಿಬಂಧನೆಗಳು:**

1. ಈ ಅಧ್ಯಯನವು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಆಯಾಮದ ನಿಯಮಕ್ಕೆ ಅನುಗುಣವಾಗಿರುತ್ತದೆ.
2. ಸಂಶೋಧನಾ ಬರವಣಿಗೆಯು ಗುರುಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವಚಿಂತನೆಗಳನ್ನು ಒಳಗೊಂಡಿರಬೇಕು.
3. ಗರಿಷ್ಠ 60,000 ಪದಗಳಿಗೆ ಮೀರದಂತೆ ಮುದ್ರಣದಲ್ಲಿ ಡೆಮಿ 1/8 ಆಕಾರದ ಕೃತಿಯಲ್ಲಿ 200 ಪುಟಗಳಿಗೆ ಹೊಂದುವಂತೆ ಇರಬೇಕು.
4. ಈ ಪ್ರಶಸ್ತಿಯು 10,000 ರೂಪಾಯಿ ಮೊತ್ತದ ನಗದನ್ನು ಹೊಂದಿರುತ್ತದೆ.
5. ಕೃತಿಯ ಮೌಲ್ಯಮಾಪನ ಮತ್ತು ಪ್ರಶಸ್ತಿಯ ಆಯ್ಕೆಯು ವಿಶ್ವವಿದ್ಯಾನಿಲಯ ನಿಯೋಜಿತ ಆಯ್ಕೆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.
6. ಕೃತಿಯ ಸಂಶೋಧನಾ ಬರಹದ ಕರಡು (ಹಾರ್ಡ್ ಕಾಪಿ) ಪ್ರತಿಯನ್ನು 2021 ಜುಲೈ 31ರ ಒಳಗಾಗಿ ನಿರ್ದೇಶಕರು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸತಕ್ಕದ್ದು.
7. ನಿಗದಿತ ದಿನಾಂಕದ ನಂತರ ಬಂದ ಬರಹಗಳನ್ನು ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ಬೇಕಾದಲ್ಲಿ ಅಧ್ಯಯನ ಪೀಠವನ್ನು ಸಂಪರ್ಕಿಸಬಹುದು. ಅಥವಾ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ತಿಳಿದುಕೊಳ್ಳುವುದು. ದೂರವಾಣಿ–9845665807.
8. ಪ್ರಶಸ್ತಿ ಪ್ರದಾನ ಸಮಾರಂಭವು ನಾರಾಯಣ ಗುರುಗಳ ಜನ್ಮದಿನದ ಸಂದರ್ಭದಲ್ಲಿ ಇರುತ್ತದೆ.
9. ಪ್ರಶಸ್ತಿ ಸಮಿತಿ ಮತ್ತು ಮೌಲ್ಯಮಾಪಕರ ತೀರ್ಮಾನವೇ ಅಂತಿಮ.

**ಡಾ. ಗಣೇಶ್ ಅಮೀನ್ ಸಂಕಮಾರ್**
ಸಂಯೋಜಕರು